**ಕರ್ನಾಟಕ ಸರ್ಕಾರ**

ಸಂ. ಕಂಇ 158 ಟಿಎನ್‌ಆರ್ 2020(ಭಾ1)

ಕರ್ನಾಟಕ ಸರ್ಕಾರಿ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 21-05-2020

**ಸ್ಪಷ್ಟೀಕರಣ**

ರಾಜ್ಯ ಸರ್ಕಾರವು ಆದೇಶ ಸಂಖ್ಯೆ ಕಂಇ 158 ಟಿಎನ್‌ಆರ್ 2020, ದಿ.18.05.2020ರಂದು ಕೋವಿಡ್- 19 ಸೋಂಕು ಹರಡುವಿಕೆಯನ್ನು ನಿಯಂತ್ರಿಸಲು ಲಾಕ್‌ಡೌನ್ ಕ್ರಮಗಳ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಇವುಗಳು ರಾಜ್ಯಾದ್ಯಂತ ದಿ.18.05.2020 ರಿಂದ ದಿ.31.05.2020ರವರೆಗೆ ಜಾರಿಯಲ್ಲಿರುತ್ತವೆ.

ಸದರಿ ಆದೇಶದ ಮಾರ್ಗಸೂಚಿಗಳ ಕ್ರಮ ಸಂ.2 **(ರಾಜ್ಯಾದ್ಯಂತ ಈ ಕೆಳಗಿನ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ)** ರಲ್ಲಿನ ಉಪ ಸಂ.(v) ಈ ಕೆಳಕಂಡಂತಿರುತ್ತದೆ;

> "ಎಲ್ಲಾ ಸಿನಿಮಾ ಮಂದಿರಗಳು, ಶಾಪಿಂಗ್ ಮಾಲ್‌ಗಳು, ಜಿಮ್‌ಗಳು, ಈಜು ಕೊಳಗಳು, ಮನರಂಜನಾ ಪಾರ್ಕ್‌ಗಳು, ಬಾರ್‌ಗಳು ಮತ್ತು ಆಡಿಟೋರಿಯಂಗಳು, ಸಮಾವೇಶ ಮಂದಿರಗಳು ಮತ್ತು ಇಂತಹ ಇತರೆ ಸ್ಥಳಗಳು. ಕ್ರೀಡಾ ಸಂಕೀರ್ಣಗಳು ಮತ್ತು ಸ್ಟೇಡಿಯಾಗಳನ್ನು ತೆರೆಯಲು ಅನುಮತಿಸಲಾಗಿದೆ. ಆದರೆ ಪ್ರೇಕ್ಷಕರಿಗೆ ಅನುಮತಿ ಇರುವುದಿಲ್ಲ."

ಅನೇಕ ಕ್ರೀಡಾ ಸಂಸ್ಥೆಗಳು/ಕ್ಲಬ್‌ಗಳು/ಇತರ ಸಂಸ್ಥೆಗಳು ತಮ್ಮ ವ್ಯಾಪ್ತಿಗಳಲ್ಲಿ ಕ್ರೀಡಾ ಚಟುವಟಿಕೆಗಳನ್ನು ಪುನರಾರಂಭಿಸುವ ಬಗ್ಗೆ ಸ್ಪಷ್ಟೀಕರಣ ನೀಡುವಂತೆ ಕೋರಿರುತ್ತಾರೆ.

ಈ ಕ್ರೀಡಾ ಸಂಸ್ಥೆಗಳು/ಕ್ಲಬ್‌ಗಳು/ಇತರೆ ಸಂಸ್ಥೆಗಳು ಬೆಳಿಗ್ಗೆ 7.00 ರಿಂದ ಸಂಜೆ 7.00 ರವರೆಗೆ (ಭಾನುವಾರ ಹೊರತುಪಡಿಸಿ ಎಲ್ಲಾ ದಿನಗಳಲ್ಲಿ) ಪ್ರೇಕ್ಷಕರಿಲ್ಲದೆ ತಮ್ಮ ಕ್ರೀಡಾ ಚಟುವಟಿಕೆಗಳನ್ನು ಪುನರಾರಂಭಿಸಲು ಎಲ್ಲಾ ಸಾಮಾಜಿಕ ಅಂತರ ಮತ್ತು ನೈರ್ಮಲ್ಯ ಕ್ರಮಗಳನ್ನು ಅಳವಡಿಸಿಕೊಂಡು ಮತ್ತು ಮೇಲಿನ ಉಲ್ಲೇಖಿತ ಆದೇಶದ **ಅನುಬಂಧ-II** ರಲ್ಲಿ ನಿಗದಿಪಡಿಸಿದ ರಾಷ್ಟ್ರೀಯ ನಿರ್ದೇಶನಗಳಿಗೆ ಬದ್ಧರಾಗುವ ಷರತ್ತಿಗೊಳಪಟ್ಟು ಪುನರಾರಂಭಿಸಲು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಅಲ್ಲದೇ, ಮೇಲಿನ ಉಲ್ಲೇಖಿತ ಆದೇಶದ ಪ್ರಕಾರ ಹೋಟೆಲ್‌ಗಳು, ರೆಸ್ಟೋರೆಂಟ್‌ಗಳು, ಬಾರ್‌ಗಳು ಮತ್ತು ಇತರ ಆತಿಥ್ಯ ಸೇವೆಗಳು, ಕ್ರೀಡಾ ಸಂಸ್ಥೆಗಳು/ಕ್ಲಬ್ ಗಳು/ಇತರೆ ಸಂಸ್ಥೆಗಳ ಆವರಣದಲ್ಲಿರುವ ಈಜುಕೊಳಗಳು ಮತ್ತು ವ್ಯಾಯಾಮಶಾಲೆಗಳನ್ನು (gymnasiums) ನಿಷೇಧಿಸಿರುವುದನ್ನು ಗಮನಿಸಬಹುದಾಗಿದೆ. ಇದಲ್ಲದೆ, 65 ವರ್ಷಕ್ಕಿಂತ ಮೇಲ್ಪಟ್ಟ ವ್ಯಕ್ತಿಗಳು, ಆರೋಗ್ಯ ಸಮಸ್ಯೆ ಹೊಂದಿರುವ ವ್ಯಕ್ತಿಗಳು, ಗರ್ಭಿಣಿಯರು ಮತ್ತು 10 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು, ಅದೇ ಆದೇಶದ ಕ್ರಮ ಸಂಖ್ಯೆ 7ರ ಪ್ರಕಾರ, ಅಗತ್ಯ ಮತ್ತು ಆರೋಗ್ಯ ಉದ್ದೇಶಗಳನ್ನು ಹೊರತುಪಡಿಸಿ, ಮನೆಯಲ್ಲಿಯೇ ಇರಬೇಕೆಂದು ಪುನರುಚ್ಚರಿಸಲಾಗಿದೆ.

**(ಟಿ.ಕೆ.ಅನಿಲ್ ಕುಮಾರ್)**
ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ
ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ
ಪ್ರಾಧಿಕಾರದ ರಾಜ್ಯ ಕಾರ್ಯಕಾರಿ ಸಮಿತಿ

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.